ಆಗಲ್ಲ. ಅಂತಾದ್ದರಲ್ಲಿ ನಾವು ಸೇಬಿನ ರಸ, ಕಿತ್ತಳೆ ರಸ ಕುಡಿಸಿ ಪ್ರಯೋಗ ಮಾಡಿದ್ರೆ ನಡೆಯುತ್ತಾ? ಅದಕ್ಕೇನು ಗೊತ್ತಾಗತ್ತೆ. ನೀನು ಸ್ವಲ್ಪ ನೋಡಬಾರದಾ?' ಎಂದು ನನ್ನನ್ನು ನೋಡಿದಳು.

ಪ್ರತಿಯೊಂದೂ ನನ್ನದೇ ತಪ್ಪಾಗುತ್ತದೆ ಎಂದು ಗೊಣಗಿಕೊಳ್ಳುತ್ತಾ ನನ್ನ ಲ್ಯಾಪ್‌ಟಾಪ್ ತೆಗೆದೆ. ಫೇಸ್‌ಬುಕ್ಕಿನಲ್ಲಿ ನಾಲ್ಕು ನೋಟಿಫಿಕೇಶನ್ ಇವೆ ಎಂದು ಮೆಸೇಜು ಬಂತು. ಬೆಂಗಳೂರಿನಲ್ಲಿ ಪ್ರಸಿದ್ಧ ನಟನ ಮಗನೊಬ್ಬ ಊಬರ್ ಡ್ರೈವ್ ಮಾಡುತ್ತಾ ಇದ್ದಾನೆ ಎಂಬ ಸುದ್ದಿಯನ್ನು ಯಾರೋ ಹಂಚಿಕೊಂಡಿದ್ದರು. ಮಗನೂ ನಟನೇ ಆದರೆ ಚಿತ್ರರಂಗದಲ್ಲಿ ಅಥವಾ ಕಿರುತೆರೆಯಲ್ಲಿ ಎಲ್ಲಿಯೂ ಅವಕಾಶ ಸಿಗದೇ ಇರುವುದರಿಂದ ಊಬರ್ ಡ್ರೈವ್ ಮಾಡ್ತೀನಿ, ಅದರಲ್ಲಿ ತಪ್ಪೇನಿದೆ ಎಂದು ಆ ನಟ ಮಾತಾಡಿದ್ದ. ಎಲ್ಲ ಪತ್ರಿಕೆಗಳಲ್ಲಿಯೂ ಅದೇ ಸುದ್ದಿ. ಅಷ್ಟೇ ಅಲ್ಲ, ಆತ ನಟಿಸುತ್ತಿದ್ದಾಗಲೂ ಆತನನ್ನು ಮಾತೂ ಆಡಿಸದ ಕಿರುತೆರೆಯ ವಾಹಿನಿಗಳು ಆತನನ್ನು ಸಂದರ್ಶನ ಬೇರೆ ಮಾಡಿದ್ದವು. ಬಹಳ ಜನ, ಈ ಸುದ್ದಿಯನ್ನು ತಮ್ಮ ಗೋಡೆಯಲ್ಲಿ ಹಂಚಿಕೊಳ್ಳುವ ಜತೆ ಈತ ಇಂಥ ಕೆಲಸ ಮಾಡುತ್ತಾ ಇರುವುದು ನಮಗೆಲ್ಲಾ ಒಂದು ಹೆಮ್ಮೆಯ ವಿಷಯ, ಮಾಡೋದಕ್ಕೆ ಯಾವ ಕೆಲಸವಾದರೇನು ಎಂದು ತಾವೂ ಒಂದೆರಡು ಸಾಲು ಬರೆದೂ ಇದ್ದರು. ಯಾರೋ ಸಿನಿಮಾ ನಿರ್ದೇಶಕ ತನ್ನ ಮುಂದಿನ ಚಿತ್ರದಲ್ಲಿ ಆತನಿಗೆ ಒಂದು ಅವಕಾಶವನ್ನೂ ಕೊಡುತ್ತೇನೆ ಎಂದು ಘೋಷಿಸಿಯೇಬಿಟ್ಟಿದ್ದ.

ಈತ ಎಷ್ಟು ದಿನದಿಂದ ಊಬರ್ ಓಡಿಸುತ್ತಿದ್ದಾನೋ ಈಗ ಯಾರ ಕಣ್ಣಿಗೆ ಬಿದ್ದನೋ ಇದ್ದಕ್ಕಿದ್ದ ಹಾಗೆ ಅವನ ಹೆಸರು ಹೇಳಿಕೊಂಡು ಎಲ್ಲರೂ ತಮ್ಮ ಔದಾರ್ಯವನ್ನು ಪ್ರದರ್ಶಿಸುತ್ತಿದ್ದಾರೆ ಅನ್ನಿಸಿತು. ಅಪ್ಪನ ಶ್ರಾದ್ಧ ಮಾಡುವುದಕ್ಕೆ ತಕ್ಷಣ ದುಡ್ಡು ಸಿಕ್ಕದೇ ಈ ಕೆಲಸ ಮಾಡುತ್ತಿದ್ದೀನೆಂದೂ ಅದರಲ್ಲಿ ತನಗೆ ಯಾವ ತಪ್ಪೂ ಕಾಣಿಸುವುದಿಲ್ಲ ಎಂದೂ ಆತ ಹೇಳಿಕೊಂಡಿದ್ದ. ಹೇಳಿಕೊಂಡಿದ್ದನೋ ಅಥವಾ ಆತ ಹೇಳುವ ಹಾಗೆ ಇವರೆಲ್ಲ ಪ್ರಶ್ನಿಸಿದ್ದರೋ? ಅಪ್ಪ ನಟಿಸಿದ್ದೆಲ್ಲ ಉದಾತ್ತವಾದ ಪಾತ್ರಗಳು. ಸುದ್ದಿಪತ್ರಿಕೆಯೊಂದು 'ಒಂದು ಕಾಲದಲ್ಲಿ ಕನ್ನಡ ಚಿತ್ರರಂಗ ಕಂಡ ಉತ್ತಮ ನಟನ ಮಗ ಈಗ ಊಬರ್ ಡ್ರೈವರ್' ಎಂಬ ಶೀರ್ಷಿಕೆಯೊಂದಿಗೆ ಸುದ್ದಿ ಪ್ರಕಟಿಸಿದ್ದರು. ಇನ್ಯಾರೋ ಇಂಥ ವ್ಯಕ್ತಿ ನಮ್ಮ ಪಕ್ಕದ ಮನೆಯಲ್ಲಿದ್ದಾನೆ ಎಂದು ಹೇಳಿಕೊಳ್ಳುವುದಕ್ಕೆ ನನಗೆ ಹೆಮ್ಮೆಯಾಗುತ್ತದೆ ಎಂದು ಮನೆಪಕ್ಕದ ಊಬರ್ ಡ್ರೈವರ್‌ಗಳೆಲ್ಲರಿಗೂ ಪುಳಕವನ್ನುಂಟುಮಾಡಿದ್ದ.

ಒಟ್ಟು ಈ ಸುದ್ದಿ ಪ್ರಕಟಿಸುತ್ತಿರುವವರಿಗೂ, ಅದನ್ನು ಹಂಚಿಕೊಳ್ಳುತ್ತಿರುವವರಿಗೂ ಅಪ್ಪನ ಬಗ್ಗೆಯೂ ಮಗನ ಬಗ್ಗೆಯೂ ಕಾಳಜಿ ಇಲ್ಲ. ಸುದ್ದಿಯ ರೋಚಕತೆ ಮಾತ್ರ ಮುಖ್ಯ ಅನ್ನಿಸಿತು. ಸುಮ್ಮನಿರಲಾಗದೇ 'ಅಪ್ಪನ ಫ್ಯಾಂಟಸಿ ಲೋಕದ ನೆರಳಿನಲ್ಲಿ ಮಗನ ಬದುಕನ್ನು ನೋಡುವ ಮನಃಸ್ಥಿತಿಯೇ ಕ್ರೂರವಾದದ್ದು. ಈತನ ಬಗ್ಗೆ ನಮಗೆ ಹೆಮ್ಮೆಯಿದೆ ಎಂದು ಈ ಸುದ್ದಿಯನ್ನು ತಮ್ಮ ಗೋಡೆಯಲ್ಲಿ ಹಂಚಿಕೊಳ್ಳುತ್ತಿರುವವರ ಕಾಳಜಿಗೂ 'ಉದಾತ್ತ ನಟನ ಮಗ ಈಗ ಊಬರ್ ಡ್ರೈವರ್' ಎಂಬ ವಾಸ್ತವ ಹಾಗೂ ಕಲ್ಪನಾಲೋಕವನ್ನು ಕಲಬೆರಕೆ ಮಾಡುತ್ತಿರುವ ಪತ್ರಿಕೆಯ ಬೇಜವಾಬ್ದಾರಿಗೂ ವ್ಯತ್ಯಾಸವಿಲ್ಲ. ಒಂದಕ್ಕೆ ಸುದ್ದಿಯನ್ನು ಹಸಿಹಸಿ ಹಂಚುವ ತುರಿಕೆಯಾದರೆ ಈ ಫೇಸ್‌ಬುಕ್ಕಿಗರಿಗೆ ಎಷ್ಟೊ ಲೈಕುಗಳು ಬಂದಿವೆ ಎನ್ನುವುದೇ ಮುಖ್ಯ. ಇದು ಸುದ್ದಿ ಮಾಡುವ ವಿಷಯವೇ ಅಲ್ಲ. ದಯವಿಟ್ಟು ಸಾಮಾಜಿಕ ಜಾಲತಾಣಗಳು ಹಾಗೂ ಸುದ್ದಿವಾಹಿನಿಗಳು ಇದರ ಬಗ್ಗೆ ಮಾತಾಡುವುದು ಕಮ್ಮಿ ಮಾಡಿದರೆ ಅದೇ ಈ ನಟನ ಮಗನಿಗೆ ಕೊಡುವ ಕನಿಷ್ಠ ಗೌರವ' ಎಂದು ನನ್ನ ಗೋಡೆಯಲ್ಲಿ ಸ್ಟೇಟಸ್ ಮೆಸೇಜ್ ಹಾಕಿ ಅದನ್ನು ಆ